

ಎಂ.ಎಸ್. ಆಶಾದೇವಿ

# ಸತ್ಯೇನೇ ಗುಬ್ಬಿ...

ಪ್ರಖ್ಯಾತ ಸ್ತ್ರೀವಾದಿಯೊಬ್ಬಳ ಮಾತೊಂದನ್ನು ನಾನು ಮತ್ತೆಮತ್ತೆ ನೆನೆಯುತ್ತಲೇ ಇರುತ್ತೇನೆ. ಅದೊಂದು ಆತುಕೊಳ್ಳಲು ಇರುವ ಹೆಗಲೆಂಬಂತೆ, ನಮ್ಮ ಮನೆಯನ್ನು ಕಟ್ಟಬಹುದಾದ ತಳಪಾಯವೆಂಬಂತೆ. ಲೋಕ ಇಂದಲ್ಲ ನಾಳೆ ನಮ್ಮನ್ನು ಜೀವಘನತೆಯ ವ್ಯಕ್ತಿತ್ವವಾಗಿ ಗುರುತಿಸಲು ಇದು ಘೋಷವಾಕ್ಯವಾದೀತು ಎಂದು ನನಗೆ ಅನ್ನಿಸುತ್ತಲೇ ಇರುತ್ತದೆ ಎನ್ನುವ ಕಾರಣಕ್ಕಾಗಿ ಈ ಮಾತನ್ನು ನಾನು ನನ್ನ ಆತ್ಮದ ಪಲುಕು ಎನ್ನುವಂತೆ ಸ್ವಗತದಲ್ಲೂ ಲೋಕಾಂತದಲ್ಲೂ ಗುನುಗಿಕೊಳ್ಳುತ್ತೇನೆ.

ಅದು ‘With these stories we live’ ಎನ್ನುವ ಆಡ್ರಿನ್ ರಿಚ್‌ಳ ಮಾತು. ಹೆಣ್ಣಿನ ಕಥೆಗಳೆಂದರೆ ಎದುರು ಈಜಿನ ಕಥೆಗಳು, ಬೆಂಕಿಗೆ ಹಾಕಿ ಸತ್ಯೇನೇ ಗುಬ್ಬಿ ಎಂದರೆ ಮೈ ಬೆಚ್ಚಗಾಯಿತು ಎನ್ನುವ ಗಟ್ಟಿಜೀವದ ಕಥೆಗಳು; ಲೋಕ ಸೋತವಳು ಎನ್ನುತ್ತಿರುವಾಗ ಒಳಗೇ ತನ್ನ ಗೆಲುವಿನ ದಾರಿಯನ್ನು ಕಂಡುಕೊಂಡ ಹೆಣ್ಣಿನ ಜೀವಗಾಳಿನ ಕಥೆಗಳು. ಇದು ಕಣ್ಣಗಾಯಗಳನ್ನು ಅರಿಯದ ಮುಗ್ಧತೆಯಲ್ಲ, ಮರಳಿನ ಗೂಡೂ ಅಲ್ಲ. ಪ್ರಕೃತಿಯ ಅಸೀಮ ಶಕ್ತಿಯ ಭಾಗವೇ ಆದ ಹೆಣ್ಣು ತನ್ನನ್ನು ತಾನು ಕಂಡುಕೊಳ್ಳಬೇಕಾದ ನಿಜದ ನೆಲೆ ಅದು ಎನ್ನುವ ಗಾಢ ವಿಶ್ವಾಸ.

ಜಿ.ಎನ್. ಧನಂಜಯಮೂರ್ತಿಯವರ ‘ರಾಗಿತೆನೆ’ ಕೃತಿಯನ್ನು ಓದಿದಾಗ ಒಮ್ಮೆ ಬೆಚ್ಚಿಬೀಳುವಂತಾಯಿತು. ‘ಪದ ಕುಸಿಯೆ ನೆಲವಿಲ್ಲವೇನೋ’ ಎನ್ನುವ ತೀವ್ರ ವಿಷಾದ ಆವರಿಸಿತು. ನಿಧಾನವಾಗಿ ತಿಮ್ಮಕ್ಕನ ಈ ಕಥೆ ತನ್ನೆಲ್ಲ ದುರಂತಗಳನ್ನು ಕೈಯೆತ್ತಿ ತೋರಿಸುತ್ತಲೇ ಹೆಣ್ಣಿನ ಕಥೆಯನ್ನು ಬಲಪಡಿಸುತ್ತಿದೆ ಎನ್ನುವ ಸತ್ಯ ಕಣ್ಣೆದುರಿಗೆ ಕಾಣಿಸತೊಡಗಿತು.

ಆದರೆ ಈ ಕಥೆಯನ್ನು ಓದುವಾಗ ಮನಸ್ಸಿಗಾದ ಕಷ್ಟವನ್ನು ಹೇಳುವುದು ಕಲೆಯನ್ನು, ಕಲಾನುಭವವನ್ನು ಕುರಿತ ಎಲ್ಲ ತಾತ್ವಿಕತೆಗಳ ಆಚೆಗಿನದು. ಮನಸ್ಸು ಭಾವುಕವಾಯಿತು ಎನ್ನುವುದಲ್ಲ. ಸತ್ಯದ ಕಠೋರತೆಯನ್ನು ಎದುರಾಗುವುದು ಮನಸ್ಸಿಗಲ್ಲ, ಬುದ್ಧಿಗೂ ಬಲು ಕಷ್ಟವಾಯಿತು. ಧನಂಜಯ ಅವರು ಭಾವುಕವಾಗಿ ಬರೆದಿದ್ದರೆ ಓದಿ ಪಕ್ಕಕ್ಕಿಡಬಹುದಾಗಿತ್ತೋ ಏನೋ. ಆದರೆ ಅವರು ಅಪಾರ ಸಂಯಮದಿಂದ ಬರೆದಿರುವುದೇ ಮೂಲವಾಗಿ ಈ ದುರಂತದಲ್ಲಿ ನಮ್ಮ ಪಾತ್ರವೇನು, ಹೊಣೆಗಾರಿಕೆಯೇನು ಎನ್ನುವ ಪ್ರಶ್ನೆಯನ್ನು ಓದುಗರಲ್ಲಿ ನಿರಂತರವಾಗಿ ಏಳಿಸುತ್ತಲೇ ಹೋಗುತ್ತದೆ. ರಷ್ಯಾದ ಜನಪದ ಕಥೆಯೊಂದರಲ್ಲಿ ಮದುವೆಯ ಮೊದಲ ರಾತ್ರಿಯೇ ಗಂಡು, ಹೆಣ್ಣಿನ ಹಾಸಿಗೆಯ ಪಕ್ಕದಲ್ಲಿ ಚಾವಟಿಯೊಂದನ್ನು ಇರಿಸುವ